ಶ್ರೀ ಜಗದೀಶ್ ಶೆಟ್ಟರ್: ನಾವು ಪ್ರಸ್ತಾಪ ಮಾಡಿಬಿಡುತ್ತೇವೆ, ಬೇಕಾದರೆ ಅವರು ನಾಳೆ ಉತ್ತರ ಕೊಡಲಿ.

ಅಧ್ಯಕ್ಷರು: ಬೇಡ, ನಾಳೆ ಒಟ್ಟಿಗೆ ಮಾಡೋಣ.

ಶ್ರೀ ಅರವಿಂದ ಲಿಂಬಾವಳಿ: ವಿಷಯ ಏನೆಂದು ನಮಗೆ ಗೊತ್ತಿಲ್ಲ. ವಿರೋಧ ಪಕ್ಷದ ನಾಯಕರು Zero Hour ನಲ್ಲಿ ನೋಟಿಸ್ ಕೊಟ್ಟಿದ್ದಾರೆ. ವಿಷಯವನ್ನಾದರೂ ಪ್ರಸ್ತಾಪ ಮಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಈಗ ಬೇಡ. ಒಟ್ಟಿಗೆ ನಾಳೆ ಮಾಡೋಣ. ಈಗ ಮಾಡಿದರೆ ವಿಷಯದ ಮಸಾಲೆ ಹೋಗಿಬಿಡುತ್ತದೆ. ಈಗ ಪ್ರಶ್ನೋತ್ತರ. ವಸಂತ ಬಂಗೇರರವರು ಪ್ರಶ್ನೆ ಕೇಳಿ.

5. ಪ್ರಶ್ನೋತ್ತರ.

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು.

ಅಕ್ಕಿ ಮಿಲ್ಲುಗಳಿಂದ ಸಂಗ್ರಹಿಸಲಾದ ಲೆವಿ ಅಕ್ಕಿ:

121 (833); ಶ್ರೀ ವಸಂತ ಬಂಗೇರ ಕೆ.

(ಅ) 2013–14ನೇ ಸಾಲಿನಲ್ಲಿ ರಾಜ್ಯದ ಅಕ್ಕಿ ಗಿರಣಿಗಳಿಂದ ಸಂಗ್ರಹಿಸಿದ ಲೆವಿ ಅಕ್ಕಿ ಎಷ್ಟು;

(ಆ) ಲೆವಿ ಅಕ್ಕಿಯನ್ನು ಬಿಸಿಯೂಟ ಯೋಜನೆಗಾಗಿ ಶಾಲಾ ಮಕ್ಕಳಿಗೆ ಉಪಯೋಗಿಸಲು ಆದೇಶ ನೀಡಲಾಗಿದೆಯೇ;

(ಇ) 2012–13 ಮತ್ತು 2013–14ನೇ ಸಾಲಿನಲ್ಲಿ ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಎಷ್ಟು ಕ್ವಿಂಟಾಲ್ ಭತ್ತವನ್ನು ಖರೀದಿಸಲಾಗಿದೆ;

(ಈ) ಎ ಗ್ರೇಡ್ ಭತ್ತವನ್ನು ಎಷ್ಟು ಖರೀದಿಸಲಾಗಿದೆ;

(ಊ) ಈ ಯೋಜನೆಯಡಿ ಪಾವತಿಸಲಾದ ಮೊತ್ತ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

(ಅ) 2013–14ನೇ ಸಾಲಿಗೆ ಒಟ್ಟು 1,61,996.091 ಮೆ. ಟನ್ ಅಕ್ಕಿಯನ್ನು ಲೆವಿ ರೂಪದಲ್ಲಿ ಸಂಗ್ರಹಿಸಲಾಗಿದೆ.

(ಆ) ಲೆವಿ ಅಕ್ಕಿಯ ಪೈಕಿ ಮಧ್ಯಾಹ್ನ ಉಪಹಾರ ಯೋಜನೆಗೆ 3,753 ಮೆ. ಟನ್ ಅಕ್ಕಿಯನ್ನು ಹಂಚಿಕೆ ಮಾಡಲಾಗಿದೆ.

(ಇ) 2012–13ನೇ ಸಾಲಿನಲ್ಲಿ ರಾಜ್ಯವು ಒಟ್ಟು 21,764.321 ಮೆ. ಟನ್ (2,17,643.21 ಕ್ವಿಂಟಾಲ್) ಭತ್ತವನ್ನು ಖರೀದಿಸಿರುತ್ತದೆ.

2013–14ನೇ ಸಾಲಿನಲ್ಲಿ 2,29,215.603 ಮೆ. ಟನ್ (22,92156.03 ಕ್ವಿಂಟಾಲ್) ಭತ್ತವನ್ನು ಖರೀದಿಸಲಾಗಿರುತ್ತದೆ.

(ಈ) 2013–14ನೇ ಸಾಲಿನ 1007 ಮೆ. ಟನ್ "ಎ" ಗ್ರೇಡ್ ಭತ್ತವನ್ನು ಖರೀದಿಸಲಾಗಿದೆ.

(ಉ) 2013–14ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ ಭತ್ತಕ್ಕೆ ಕೆಳಕಂಡಂತೆ ಪಾವತಿಸಲಾಗಿದೆ.

ಧಾನ್ಯ	ಮೆ. ಟನ್‌ಗಳಲ್ಲಿ	ಪಾವತಿಸಿದ ಮೊತ್ತ ಲಕ್ಷಗಳಲ್ಲಿ
ಭತ್ತ	2,29,215.603	` 37,103.28/–

(ಜಿಲ್ಲಾವಾರು ವಿವರಗಳನ್ನು ತಃಖ್ತೆಯಲ್ಲಿ ಲಗತ್ತಿಸಿದೆ)

ಎಂ. ಎಸ್. ಪಿ. ಯೋಜನೆಯಡಿ 2013–14ನೇ ಸಾಲಿನಲ್ಲಿ ಪಾವತಿಸಲಾದ ಮೊತ್ತದ ಜಿಲ್ಲಾವಾರು ವಿವರ:

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು ಖರೀದಿ ಮೆ.ಟನ್‌ಗಳಲ್ಲಿ	ಮೊತ್ತ ರೂ. ಲಕ್ಷಗಳಲ್ಲಿ
1	ಬೆಳಗಾಂ	6413.7	1026.19
2	ಚಾಮರಾಜನಗರ	6041.555	978.5
3	ಚಿಕ್ಕಮಗಳೂರು	1960.633	317.31
4	ದಾವಣಗೆರೆ	21277.423	3446.00
5	ಧಾರವಾಡ	674.4	107.90
6	ಹಾಸನ	3906.2	624.99
7	ಹಾವೇರಿ	13498.730	2186.73
8	ಕಾರವಾರ	2235.842	362.09
9	ಕೊಡಗು	5419.641	877.73
10	ಮಂಡ್ಯ	54108.965	8762.00
11	ಮೈಸೂರು	35734.758	5786.89
12	ರಾಯಚೂರು	10.458	1.69
13	ರಾಮನಗರ	198.440	32.15
14	ಶಿವಮೊಗ್ಗ	77060.216	12484.00
15	ತುಮಕೂರು	36.460	5.91
16	ಉಡುಪಿ	69.655	11.28
17	ಯಾದಗಿರಿ	568.527	91.92
	ಒಟ್ಟು	**2,29,215.603**	**37103.28**

ಶ್ರೀ ಕೆ. ವಸಂತ ಬಂಗೇರ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಣ ಏಕೆ ಪಾವತಿಯಾಗಿಲ್ಲ? ಎಷ್ಟು ದಿನದಲ್ಲಿ ಪಾವತಿ ಮಾಡುತ್ತೀರಿ? ನನ್ನ ಕ್ಷೇತ್ರವಾದ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಕೆಲವು ಮಿಲ್ಲುಗಳವರಿಗೆ ಹಣ ಪಾವತಿಯಾಗಿಲ್ಲ ಎಂದು ತಿಳಿಸಿರುತ್ತಾರೆ. ಇದು ಸರಿಯೇ? ಸರಿಯಾದಲ್ಲಿ, ಏಕೆ ಪಾವತಿಯಾಗಿಲ್ಲ ಮತ್ತು ಇದನ್ನು ಎಷ್ಟು ಸಮಯದಲ್ಲಿ ಪಾವತಿ ಮಾಡುತ್ತೀರಿ?

ಶ್ರೀ ದಿನೇಶ್ ಗುಂಡೂರಾವ್: ಅವರು ಕೇಳಿರುವ ಪ್ರಶ್ನೆ ಲೆವಿ ಅಕ್ಕಿಗೆ ಸಂಬಂಧಪಟ್ಟಿರುವುದಾಗಿದೆ. ಈಗ ಅವರು ಕೇಳುತ್ತಿರುವಂಥ ಪ್ರಶ್ನೆಯೇ ಬೇರೆಯಾಗಿದೆ. ಅವರು ಕೇಳಿರುವ ಪ್ರಶ್ನೆಗೆ ನಾವು ಉತ್ತರ ಕೊಟ್ಟಿದ್ದೇವೆ. ಈಗ ಅವರು ಕೇಳಿರುವ ಉಪ ಪ್ರಶ್ನೆಗೆ ನಾನು ಆಮೇಲೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಆಯಿತು ಬಿಡಿ.

ಹೊಸ ಬಸ್ಸುಗಳನ್ನು ನೀಡುವುದು

122 (1423); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ

(ಅ) ಬೆಳಗಾವಿ ಜಿಲ್ಲೆ, ರಾಯಭಾಗ, ತಾಲ್ಲೂಕು ಭಾಗದಲ್ಲಿ ಬಸ್ ನಿಲ್ದಾಣಕ್ಕೆ ಕಾಂಪೌಂಡ್ ಹಾಗೂ ಸಿ. ಸಿ. ರಸ್ತೆ ನಿರ್ಮಾಣ ಮಾಡುವ ಬಗ್ಗೆ ಟೆಂಡರ್ ಪ್ರಕ್ರಿಯೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಪ್ರಾರಂಭ ಮಾಡಲು ಇರುವ ತೊಂದರೆಗಳೇನು;

(ಇ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

(ಈ) ರಾಯಭಾಗ ತಾಲ್ಲೂಕು, ಕೆ.ಎಸ್.ಆರ್.ಟಿ.ಸಿ. ಘಟಕಕ್ಕೆ ಎಷ್ಟು ಹೊಸ ಬಸ್‌ಗಳನ್ನು ನೀಡಲಾಗುವುದು; ಹಾಗಿದ್ದಲ್ಲಿ ಕ್ಷೇತ್ರದಲ್ಲಿ ಸಾರ್ವಜನಿಕರ ಸೇವೆಗಾಗಿ 20 ಹೊಸ ಬಸ್ಸುಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

(ಅ) ಬಂದಿದೆ.